ಶ್ರೀ ಜೆ.ಸಿ. ಮಧುಸ್ವಾಮಿ: ನಾವು ಆಗಾಗ ಬಾವಿಗೆ ಬೀಳುತ್ತಿರುತ್ತೇವೆ. ಈಗ ಅವರು ನಮ್ಮ ಜೊತೆಗೆ ಬರಬೇಕೆಂದು ಕೇಳಿಕೊಳ್ಳುತ್ತೇವೆ.

ಉಪಾಧ್ಯಕ್ಷರು: ದಯವಿಟ್ಟು ತಮ್ಮ ಸ್ಥಾನಕ್ಕೆ ಬರಬೇಕು.

ಶ್ರೀ ಎಂ. ಮಹದೇವ್: ವಾಟಾಳ್ ನಾಗರಾಜ್ ಅವರು ಬಾವಿಗೆ ಬಿದ್ದಿದ್ದಾರೆ, ಆದರೆ ಹಗ್ಗ ಇಲ್ಲವಲ್ಲ ಎತ್ತುವುದಕ್ಕೆ?

ಉಪಾಧ್ಯಕ್ಷರು: ಇದು ಹಗ್ಗ ಬೇಕಾಗಿರತಕ್ಕ ಬಾವಿ ಅಲ್ಲ.

(ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದಲೇ ಮಾತನಾಡಿದರು.)

ಶ್ರೀ ಎಂ. ಮಹದೇವ್: ವಾಟಾಳ್ ನಾಗರಾಜ್ ಅವರನ್ನು ಎತ್ತುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಇದ್ದಕಿದ್ದಂತೆ ಏಕೆ ಅವರಿಗೆ ಉದ್ರೇಕ ಬರುತ್ತದೆಂದು ಗೊತ್ತಿಲ್ಲ. ಹಗ್ಗ ಅಂದರೆ ಸೌಹಾರ್ದದ ಹಗ್ಗ. ಹಗ್ಗ ಅಂದರೆ ಎಳೆಯುವ ಹಗ್ಗ ಅಲ್ಲ. ನಾವು ಸ್ವೀಕರ್ ಎಲ್ಲ ಸೇರಿಕೊಂಡು ಸಹಾಯ ಮಾಡುತ್ತಿದ್ದೇವೆ. ಅದು ಆ ಹಗ್ಗ

ಶ್ರೀ ಕೆ. ಹೆಚ್. ರಂಗನಾಥ: ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ನೀತಿ ಇದೆ.ಆ ಪ್ರಕಾರ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಸದನದ ಮೂಲಕ ಅವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಮ್ಮ ಭಿನ್ನಭಿಪ್ರಾಯ ಇಲ್ಲ ಅದರೆ ಈಗ ಅವರು ಯಾರು ಏನು ಹೇಳಿದರೂ ಕೇಳುತ್ತಿಲ್ಲ. ಆದ್ದರಿಂದ ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರ ಮನಸ್ಸಿಗೆ ನೋವು ಮಾಡತಕ್ಕ ಪ್ರಶ್ನೆ ಯಾರದ್ದೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ತಮ್ಮ ಸ್ಟೇಟ್‌ಮೆಂಟ್ ಅಫಿಷಿಯಲ್ ಆಗುತ್ತದೆ. ಅದಕ್ಕೆ ಮುಂಚೆ ನಾನು ತಮಗೆ ಸಹಾಯ ಮಾಡುತ್ತೇನೆ. ಮುಖ್ಯ ಮಂತ್ರಿಗಳ ಜೊತೆಯಲ್ಲಿ ನಾನು ಈ ವಿಚಾರವನ್ನು ಮಾತನಾಡಿದ್ದೇನೆ. ಮುಖ್ಯ ಮಂತ್ರಿಗಳು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಮಾತಾಡುತ್ತೇನೆಂದು ಹೇಳಿದ್ದಾರೆ. ಮುಂಬೈಯಲ್ಲಿ ಬಸವೇಶ್ವರರ, ಕಿತ್ತೂರು ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡುವುದಕ್ಕೆ ನಾನು ಮಾತನಾಡಿ ಒತ್ತಾಯ ಮಾಡುತ್ತೇನೆಂದು ಹೇಳಿದ್ದಾರೆ ನಮ್ಮ ಸರ್ಕಾರ ಹಣ ಕಾಸಿನ ದೃಷ್ಟಿಯಿಂದ ಅವರಿಗೆ ಸಹಾಯ ಮಾಡುತ್ತೆದೆಂಬ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಅದರ ಬಗ್ಗೆ ಹೇಳಿಕೆಯನ್ನು ಮಾಡಿಸಲಿಕ್ಕೆ ಮಾನ್ಯ ರಂಗನಾಥ್ ರವರು ಮುಖ್ಯಮಂತ್ರಿಗಳ ಜೊತೆ ಮಾತನಾಡಬೇಕೆಂದು ನಾನು ಸಹ ಒತ್ತಾಯ ಮಾಡುತ್ತೇನೆ. ಈ ಹಿನ್ನೆಲೆಯಲ್ಲಿ ಮಾನ್ಯ ವಾಟಾಳ್ ನಾಗರಾಜ್ ರವರು ತಮ್ಮ ಪೀಠಕ್ಕೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್: ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ದಯಮಾಡಿ ಮಾನ್ಯ ವಾಟಾಳ್ ನಾಗರಾಜ್ ರವರು ತಮ್ಮ ಪೀಠಕ್ಕೆ ಬಂದು ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ನಿಯಮ 334ರ ಮೇರೆ ಚರ್ಚೆ

(1) ಹತ್ತು ಹೆಚ್.ಪಿ. ರೈತರಿಗೆ ನೀಡುತ್ತಿರುವ ರಿಯಾಯಿತಿಯ ಮುಂದುವರಿಕೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಉಪಾಧ್ಯಕ್ಷರೆ, ಕೆಇಬಿಯವರು ಈಗ ಹತ್ತು ಹೆಚ್.ಪಿ.ವರೆಗೆ ರೈತರ ಪಂಪುಸೆಟ್ಟುಗಳಿಗೆ ಯಾವುದೇ ಹಣವನ್ನು ತೆಗೆದುಕೊಳ್ಳುವುದಿಲ್ಲ. ಇದರಿಂದ ರೈತರಿಗೆ ಬಹಳ ಉಪಯುಕ್ತವಾಗಿರುತ್ತದೆ.

ಆದರೆ,ಇನ್ನು ಮುಂದೆ ಈಗ ಕೊಡುತ್ತಿರುವ ರಿಯಾಯಿತಿಯನ್ನು ಕೊಡಲಾಗುವುದಿಲ್ಲ ಹಾಗೂ ಸುಟ್ಟ ವಿದ್ಯುತ್ ಮೇಲೆ ಚಾರ್ಜ್ ಮಾಡಲಾಗುವುದೆಂದು ತಿಳಿದುಬರುತ್ತದೆ. ಅದೂ ಅಲ್ಲದೆ ಸರ್ಕಾರದವರು ಈಗ ಕೊಡುತ್ತಿರುವ ಸವಲತ್ತನ್ನು ಮುಂದುವರಿಸುವುದಾಗಿ ಸಹಾ ತಿಳಿಸುತ್ತಾ ಇರುವರು.ಆದರೆ ಯಾವುದೇ ಒಂದು ನಿರ್ದಿಷ್ಟವಾದ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಅದಕಾರಣ. ಇನ್ನು ಮುಂದೆ ಹತ್ತು ಹೆಚ್.ಪಿ.ವರೆಗೆ ಈಗ ಕೊಡುತ್ತಿರುವ ಸವಲತ್ತನ್ನು ಮುಂದುವರೆಸಲಾಗುವುದೇ ಅಥವಾ ಇಲ್ಲವೇ ಎನ್ನುವುದನ್ನು ಖಚಿತವಾಗಿ ತಿಳಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಉಪಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಮದನಗೋಪಾಲ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ದಿನಾಂಕ 23-11-1980ಕ್ಕೆ ಮುಂದೆ, ರಾಜ್ಯದಲ್ಲಿರುವ ಎಲ್ಲಾ ನೀರಾವರಿ ಪಂಪುಸೆಟ್ಟುಗಳಿಗೆ ಮೀಟರ್ ಗಳನ್ನು ಅಳವಡಿಸಿ, ಚಾಲ್ತಿಯಲ್ಲಿರುವ ಟ್ಯಾರಿಫ್‌ನಂತೆ ವಿದ್ಯುತ್ ಬಳಕೆ (ಯೂನಿಟ್) ಆಧಾರದ ಮೇಲೆ ಬಿಲ್ ಮಾಡಲಾಗುತ್ತಿತ್ತು. 17-11-1980ರಲ್ಲಿ ಒಂದೇ ದರದಲ್ಲಿ ಬಿಲ್ ಕಳುಹಿಸುವುದಕ್ಕಾಗಿ 5 ಹೆಚ್.ಪಿ. ಮತ್ತು ಅದಕ್ಕೂ ಕಡಿಮೆ ಸಾಮರ್ಥ್ಯದ ನೀರಾವರಿ ಪಂಪುಸೆಟ್‌ಗಳಿಗೆ ಮೀಟರ್‌ಗಳನ್ನು ತೆಗೆಯಲಾಯಿತು. ಈ ಅನುಕೂಲವನ್ನು 1-2-1991ರಿಂದ 10 ಹೆಚ್.ಪಿ.ಗಳ ತನಕ ವಿಸ್ತರಿಸಲಾಯಿತು. 20-6-1992 ರಿಂದ 10 ಹೆಚ್.ಪಿ. ನೀರಾವರಿ ಪಂಪು ಸೆಟ್ಟುಗಳೂ ಒಳಗೊಂಡಂತೆ ಉಚಿತ ವಿದ್ಯುತ್ ಸೌಲಭ್ಯವನ್ನು ಬಾಕಿ ಚುಕ್ತಾಗೊಳಿಸಿದ ವಿದ್ಯುತ್ ಬಳಕೆದಾರರಿಗೆ ನೀಡಲು ಆದೇಶಿಸಿತು. 31-12-1993 ರವರೆಗೆ ಯಾವ ನೀರಾವರಿ ಪಂಪುಸೆಟ್ಟು ಬಳಕೆದಾರರು ಬಾಕಿಯನ್ನು ಪಾವತಿ ಮಾಡುತ್ತಾರೋ ಅಂತಹವರಿಗೆ ಬಡ್ಡಿಯನ್ನು ಸಂಪೂರ್ಣವಾಗಿ ವಿನಾಯ್ತಿಗೊಳಿಸಲು ಆದೇಶಿಸಿತು.

ಸೆಪ್ಟೆಂಬರ್ 91, ಏಪ್ರಿಲ್ 92, ಜನವರಿ 93ರಲ್ಲಿ ಜರುಗಿದ ವಿದ್ಯುತ್ ಮಂತ್ರಿಗಳ ಸಮ್ಮೇಳನಗಳಲ್ಲಿ ಕೃಷಿಗೆ ಬಳಸುವ ನೀರಾವರಿ ಪಂಪುಸೆಟ್ಟುಗಳಿಗೆ ಪ್ರತೀ ಯೂನಿಟ್ಟಿಗೆ 50 ಪೈಸೆಯಂತೆ ಕನಿಷ್ಠ ದರ ವಿಧಿಸಬೇಕೆಂದು ತೀರ್ಮಾನಿಸಲಾಯಿತು. ಆದರೆ ಇದನ್ನು ರಾಜ್ಯದಲ್ಲಿ ಇದುವರೆಗೆ ಅನುಷ್ಠಾನಗೊಳಿಸಿಲ್ಲ. ಈ ದಿಸೆಯಲ್ಲಿ ಪಂಪುಸೆಟ್ಟುಗಳ ವಿದ್ಯುದ್ವೀಕರಣದ ಬಗ್ಗೆ ಕೆಲವು ಮಾಹಿತಿಗಳು ಇಂತಿವೆ.

1. ವರ್ಷಕ್ಕೆ ಸುಮಾರು 60,000 ನೀರಾವರಿ ಪಂಪುಸೆಟ್ಟುಗಳ ವಿದ್ಯುಧೀಕರಣಕ್ಕೆ ತಗಲುವ ಅಂದಾಜು ವೆಚ್ಚ 80 ಕೋಟಿ ರೂ.ಗಳು
2. ನೀರಾವರಿ ಪಂಪುಸೆಟ್ಟುಗಳಿಂದ ಬಳಸಲಾಗುತ್ತಿರುವ ವಿದ್ಯುತ್ ಪ್ರಮಾಣವೂ ಪ್ರತೀವರ್ಷವೂ ಹೆಚ್ಚುತ್ತಿದ್ದು, ಪ್ರಸ್ತುತ ರಾಜ್ಯದ ಒಟ್ಟು ಬಳಕೆಯಲ್ಲಿ ಸುಮಾರು ಶೇಖಡ 41.7 ರಷ್ಟು ವಿದ್ಯುತ್ ನೀರಾವರಿ ಪಂಪುಸೆಟ್ಟುಗಳಿಂದ ಬಳಕೆಯಾಗುತ್ತಿದೆ. ಪ್ರತಿಯೂನಿಟ್ಟಿಗೆ ಕನಿಷ್ಟ 50 ಪೈಸೆ ವಿಧಿಸಿದ್ದರೂ ಸಹ, ಮಂಡಳಿಗೆ 245 ಕೋಟಿ ರೂ.ಗಳ ನಷ್ಟ ಉಂಟಾಗುವುದು.
3. ಸರ್ಕಾರವು ಮಂಡಳಿಗೆ ಗ್ರಾಮೀಣ ವಿದ್ಯುದೀಕರಣದ ಬಗ್ಗೆ ಸಹಾಯ ಧನ ನೀಡುತ್ತಿದ್ದರೂ ಸಹ, ಇದು ಮಂಡಳಿಗೆ ಉಂಟಾಗುವ ನಷ್ಟವನ್ನು ಪೂರ್ಣವಾಗಿ ಭರಿಸಲು ಸಾಧ್ಯವಾಗುತ್ತಿಲ್ಲ.

ವಿಶ್ವಬ್ಯಾಂಕ್, ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ದರ ವಿಧಿಸಿಲ್ಲವೆಂಬ ಮುಖ್ಯ ಕಾರಣಕ್ಕಾಗಿ ಮಂಡಳಿಯ ಆರ್ಥಿಕ ಪರಿಸ್ಥಿತಿಯ ಮೇಲೆ ಇದರಿಂದ ದುಷ್ಪರಿಣಾಮ

ಉಂಟಾಗುತ್ತದೆಂದು ತೀರ್ಮಾನಿಸಿ ತಾನು ನೀಡುತ್ತಿರುವ ಆರ್ಥಿಕ ಸಾಲ ಸೌಲಭ್ಯವನ್ನು ನಿಲ್ಲಿಸಿದೆ.

ಈಗಾಗಲೇ ಸರ್ಕಾರವು ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸುವ ವಿಷಯದಲ್ಲಿ ಒಂದು ಸಂಪುಟ ಉಪ ಸಮಿತಿಯನ್ನು ರಚಿಸಿರುತ್ತದೆ. ಅಲ್ಲದೇ ವಿದ್ಯುಚ್ಛಕ್ತಿ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಜಂಟೀ ಸಮಿತಿಯೂ ಕೂಡ ಈ ವಿಷಯವನ್ನು ಪರಿಶೀಲಿಸುತ್ತಿದೆ. ಈ ಸಮಿತಿಗಳ ಶಿಫಾರಸ್ಸುಗಳ ಆಧಾರದ ಮೇಲೆ ಸರ್ಕಾರವು ರೈತರ ಪಂಪುಸೆಟ್ಟುಗಳಿಗೆ ಕೊಟ್ಟಿರುವ ರಿಯಾಯಿತಿಯನ್ನು ಮುಂದುವರಿಸುವ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಶಿವಮೊಗ್ಗ-ಭದ್ರಾವತಿ ಮಹಾನಗರ ಪಾಲಿಕೆಗೆ ಬಿಡುಗಡೆ ಆಗಿರುವ ಹಣಕ್ಕೆ ನಿರ್ಬಂಧ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೆ, ಶಿವಮೊಗ್ಗ-ಭದ್ರಾವತಿ ಮಹಾನಗರ ಪಾಲಿಕೆ ರೂಪಾಯಿ 3 ಕೋಟಿ ಸಾಲ ಬಿಡುಗಡೆಯಾಗಿದ್ದು, ಆ ಹಣಕ್ಕೆ ನಿರ್ಬಂಧ ಯಾವಾಗಿನಿಂದ ಇತ್ತು? ಹಾಗೂ ನಿರ್ಬಂಧ ಯಾವಾಗ ತೆಗೆದು ಹಾಕಿದೆ? ಈ ಹಣಕ್ಕೆ ನಿರ್ಬಂಧ ಇದ್ದಾಗಲೂ ಇದಕ್ಕೆ ಬಡ್ಡಿ ಹಾಕಿದ್ದು ಸರಿಯೇ? ಹಾಗೂ ಎಷ್ಟು ಬಡ್ಡಿ ಹಾಕಲಾಗಿದೆ? ಈ ಬಡ್ಡಿ ಹಣವನ್ನು ರದ್ದು ಮಾಡಲಾಗಿದೆಯೇ? ನಿರ್ಬಂಧ ಇರುವ ಹಣಕ್ಕೆ ಬಡ್ಡಿ ಹಾಕಿದ್ದು ಆ ಬಡ್ಡಿ ವಸೂಲಾತಿಗೆ ಎಷ್ಟು ಹಣ ಜಮಾ ಆಗಿದೆ? ಆ ವಸೂಲಾತಿ ಹಣ ವಾಪಸ್ಸು ಮಾಡುವಿರಾ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ಶಿವಮೊಗ್ಗ ಭದ್ರಾವತಿ ಮಹಾನಗರ ಪಾಲಿಕೆಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು 3 ಕೋಟಿ ರೂ.ಗಳನ್ನು ದಿನಾಂಕ 27-8-92ರಂದು ಸರ್ಕಾರವು ಮಂಜೂರಾತಿ ನೀಡಿದೆ. ಈ ಸಾಲವನ್ನು ಹತ್ತಿ ವಾರ್ಷಿಕ ಸಮ ಕಂತುಗಳಲ್ಲಿ ಶೇಕಡಾ $12\frac{1}{2}$ ಯಷ್ಟು ಬಡ್ಡಿ ಮತ್ತು ಶೇಕಡಾ 4 ರಷ್ಟು ಚಕ್ರ ಬಡ್ಡಿಯೊಡನೆ, ಪಾವತಿ ಮಾಡಬೇಕು. ಹೊಸದಾಗಿ ರಚಿತವಾದ ಈ ನಗರ ಪಾಲಿಕೆಯಲ್ಲಿ ಅಗತ್ಯವಿದ್ದಷ್ಟು ತಾಂತ್ರಿಕ ಹುದ್ದೆಗಳು ಇಲ್ಲದಿದ್ದುದರಿಂದ ಸರ್ಕಾರವು ತನ್ನ ಪತ್ರ ದಿನಾಂಕ 8-12-92ರಲ್ಲಿ ಈ ಹಣವನ್ನು ತಾಂತ್ರಿಕ ಹುದ್ದೆ ಮಂಜೂರಾಗುವವರೆಗೆ ಉಪಯೋಗಿಸಕೂಡದು ಎಂದು ಆಯುಕ್ತರಿಗೆ ಸೂಚನೆ ನೀಡಿತು. ಮತ್ತೆ ಸರ್ಕಾರವು ದಿನಾಂಕ 05-3-93ರಲ್ಲಿ ಈ ಅಭಿವೃದ್ಧಿ ಕಾರ್ಯಗಳನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಕಾರ್ಯಗತಗೊಳಿಸಬೇಕೆಂದು ಸೂಚನೆ ನೀಡಿತು. ಶಿವಮೊಗ್ಗ ಭದ್ರಾವತಿ ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳಾದ ಜಿಲ್ಲಾಧಿಕಾರಿಗಳು, ಈ ಕೆಲಸಗಳನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಕಾರ್ಯಗತಗೊಳಿಸಿದಲ್ಲಿ 40 ಲಕ್ಷ ರೂ. ಇ.ಟಿ.ಪಿ. ಶುಲ್ಕ ನೀಡಬೇಕಾಗುವುದರಿಂದ ಕಾರ್ಪೊರೇಷನ್ ವತಿಯಿಂದಲೇ ಈ ಕೆಲಸ ಕಾರ್ಯಗಳನ್ನು ಮಾಡಿಸಲು ಅನುಮತಿ ಕೊಡಬೇಕೆಂದು ಕೋರಿದರು. ಸರ್ಕಾರವು ಜಿಲ್ಲಾಧಿಕಾರಿಗಳ ಸಲಹೆಯನ್ನು ಒಪ್ಪಿ ದಿನಾಂಕ 20-10-93ರಂದು ಅಭಿವದ್ಧಿ ಕೆಲಸಕಾರ್ಯಗಳನ್ನು ಕಾರ್ಪೊರೇಷನ್ ವತಿಯಿಂದಲೇ ಆಡಳಿತಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕೈಗೆತ್ತಿಕೊಳ್ಳಲು ಅನುಮತಿ ನೀಡಿತು. ಸರ್ಕಾರವು ಸಾಲದ ಹಣವನ್ನು ನಗರ ಪಾಲಿಕೆಯು ಉಪಯೋಗಿಸಿಕೊಳ್ಳುವ ಬಗ್ಗೆ ದಿನಾಂಕ 8-12-92ರಿಂದ 5-3-93ರವರೆಗೆ ಮಾತ್ರ ತಡೆಯಾಜ್ಞೆ ನೀಡಿತ್ತು. ಜಕಾತಿ ಅನುದಾನದಿಂದ ರೂ 5,,00,000 ಬಡ್ಡಿಯನ್ನು ಮುರಿದುಕೊಳ್ಳಲಾಗಿದೆ. ಸರ್ಕಾರವು ನಗರ ಪಾಲಿಕೆಯು ಸಾಲದ ಹಣವನ್ನು ಪಡೆದ ದಿನಾಂಕದಿಂದ ಮಾತ್ರ ಬಡ್ಡಿಯನ್ನು ವಿಧಿಸುವ ಬಗ್ಗೆ